ನಿಮ್ಮಲ್ಲಿರತಕ್ಕಂಥ ಓವರ್‌ಹೆಡ್ ಟ್ಯಾಂಕ್‌ಗಳ ಸಂಖ್ಯೆಗಳನ್ನೇ ಅಥವಾ ಜನರು ಉಪಯೋಗಿಸುವಂಥ ಬಾವಿಗಳ ಮೂಲವನ್ನು ಗುರುತಿಸಲಾಗಿದೆಯೇ? ಸಾಮಾನ್ಯವಾಗಿ ನೀವು ಗುರುತಿಸುವುದು ನಮ್ಮಲ್ಲಿರತಕ್ಕಂಥ ಓವರ್‌ಹೆಡ್‌ನ ಟ್ಯಾಂಕ್‌ನ ನೀರಿನ ಪ್ರಮಾಣ, ಓವರ್‌ಹೆಡ್ ಟ್ಯಾಂಕ್‌ಗೆ ಎಷ್ಟು ಹೋಗುತ್ತದೆ, ಮೋಟಾರ್‌ನಿಂದ ಎಷ್ಟು ನೀರು ಬರುತ್ತದೆ ಎನ್ನುವ ಪ್ರಮಾಣವನ್ನು ಮಾತ್ರ ತಾವು ಲೆಕ್ಕಕ್ಕೆ ತೆಗೆದುಕೊಳ್ಳುತ್ತೀರಿ. ಆದರೆ ಮನೆಮನೆಗಳಲ್ಲಿರತಕ್ಕಂಥ ಬಾವಿಗಳನ್ನು ಮತ್ತು ಅದರಿಂದ ಉಪಯೋಗಿಸತಕ್ಕಂಥ ನೀರಿನ ಪ್ರಮಾಣವನ್ನು ತಾವು ಗಣನೆಗೆ ತೆಗೆದುಕೊಳ್ಳುವುದಿಲ್ಲ. ಅದರಿಂದಾಗಿ ಒಳಚರಂಡಿ ಯೋಜನೆಯನ್ನು ಕಾರ್ಯಗತಮಾಡಲು ಸಾಧ್ಯವಾಗದೇ ಇರಬಹುದು. ಇದನ್ನು ಸಹ ತಾವು ಪರಿಗಣಿಸಬೇಕಾಗುತ್ತದೆ. ಇನ್ನೊಂದು ವಿಷಯವೆಂದರೆ ಪುರಸಭೆಯವರು ಒಳಚರಂಡಿ ಯೋಜನೆಗೆ ಹಂತಹಂತವಾಗಿ ಸಾರ್ವಜನಿಕರ ಹಣವನ್ನು ಉಪಯೋಗಿಸಿ ಮಾಡುತ್ತಿದ್ದಾರೆ. ನೀವು ಹೇಳಿದಂತೆ ವಾದ ಮಾಡುವುದಾದರೆ, ಅವರು ಇದನ್ನು ಮಾಡುವ ಹಾಗಿಲ್ಲ. ಅವರು ಇದನ್ನು ಮಾಡುವುದಾದರೆ, ನೀವೂ ಮಾಡಲು ಸಾಧ್ಯವಿದೆ. ಇದನ್ನು ತಾವು ಅರ್ಥಮಾಡಿಕೊಳ್ಳಬೇಕಾಗುತ್ತದೆ.

ಶ್ರೀ ಬಿ.ಎನ್. ಬಚ್ಚೇಗೌಡ : ಅಲ್ಲಿ ಜನಸಂಖ್ಯೆ ಇರತಕ್ಕಂಥಾದ್ದು 33 ಸಾವಿರ ಮಾತ್ರ. 45 ಸಾವಿರ ಜನಸಂಖ್ಯೆಗೆ ಅನುಗುಣವಾಗಿ ಈ ಯೋಜನೆಯನ್ನು ಸಿದ್ಧಮಾಡಿರುವುದು. 25 ವರ್ಷಗಳನ್ನು ಗಣನೆಗೆ ತೆಗೆದುಕೊಂಡು 2027 ಇಸವಿ ಎಂದು ಈ ಯೋಜನೆಯನ್ನು ಸಿದ್ಧಪಡಿಸುತ್ತಿದ್ದೇವೆ. LPCD water supply is 30 Hrs. per capita ಎಂದು ಒಟ್ಟು ಜನಸಂಖ್ಯೆಯ ಆಧಾರದ ಮೇಲೆ ಸಪ್ಲೈ ಮಾಡುತ್ತೇವೆ. ಆದರಲ್ಲಿ 30 ಲೀಟರ್ಸ್ ಕೊಡುತ್ತಿದ್ದೇವೆ. ನಾವು ನ್ಯಾಷನಲ್ ಆ್ಯವರೇಜ್ ಕೊಡಬೇಕಾದುದು 100 ಲೀಟರ್ಸ್ ಪರ್‌ಕ್ಯಾಪಿಟಾ. ಅದು ಆಗುವವರೆಗೆ ಸೂವೇಜ್ ಮೂವ್ ಆಗುವುದಿಲ್ಲ, ಬ್ಲಾಕ್ ಆಗಿ ತೊಂದರೆಯಾಗುತ್ತದೆ. ಆದ್ದರಿಂದ ವರಾಹಿ ಅಥವಾ ಬೇರೆ ನದಿ ಮೂಲದಿಂದ ನೀರು ಸರಬರಾಜು ವ್ಯವಸ್ಥೆ ಆಗುವವರೆಗೆ ಒಳಚರಂಡಿ ಯೋಜನೆಯನ್ನು ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ, unless we increase the capacity of LPCD of water.

ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಅಭಿವೃದ್ಧಿ ಶುಲ್ಕ ಸಂದಾಯ ಪದ್ಧತಿಯ ಸರಳೀಕರಣ

172 - ಶ್ರೀ ಎನ್. ರಾಜಣ್ಣ (ಭಾರತಿನಗರ) ಮಾನ್ಯ ಬೆಂಗಳೂರು ನಗರಾಭಿವೃದ್ಧಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ಮಹಾನಗರ ಪಾಲಿಕೆ ತನ್ನ ವ್ಯಾಪ್ತಿಗೆ ಹೊಸದಾಗಿ ಎಷ್ಟು ಪ್ರದೇಶಗಳನ್ನು ಸೇರಿಸಿಕೊಂಡಿದೆ?

ಆ) ಈ ಪ್ರದೇಶಗಳಲ್ಲಿ ಬರುವ ರೆವಿನ್ಯೂ ನಿವೇಶನಗಳು ಹಾಗೂ ಮನೆಗಳೆಷ್ಟು?

ಇ) ಬೆಂಗಳೂರು ಮಹಾನಗರ ಪಾಲಿಕೆಯು ಈ ಮನೆಗಳಿಗೆ ಖಾತಾ ನೀಡಲು ಅಭಿವೃದ್ಧಿ ಶುಲ್ಕವನ್ನು ನಿಗಧಿಪಡಿಸಿದೆಯೇ?

ಈ) ಹಾಗಿದ್ದಲ್ಲಿ, ಇಲ್ಲಿಯವರೆಗೆ ಎಷ್ಟು ರೆವಿನ್ಯೂ ಮನೆ ಮಾಲೀಕರು ಅಭಿವೃದ್ಧಿ ಶುಲ್ಕವನ್ನು ಪಾವತಿ ಮಾಡಿ ಖಾತಾವನ್ನು ಪಡೆದಿರುತ್ತಾರೆ?

ಉ) ಅಭಿವೃದ್ಧಿ ಶುಲ್ಕವನ್ನು ಪಾವತಿ ಮಾಡಲು ನೀಡುವ ಅರ್ಜಿಗೆ ಹಾಗೂ ಖಾತಾ ಪಡೆಯಲು ಈ ಮನೆ ಮಾಲೀಕರು ಸಾವಿರಾರು ರೂ.ಗಳನ್ನು ನೀಡಬೇಕಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಊ) ಈ ಪದ್ಧತಿಯನ್ನು ಸರಳೀಕರಣಗೊಳಿಸಿ ಅರ್ಜಿದಾರರೇ ಸ್ವಯಂ ಘೋಷಿತ ಅರ್ಜಿಗಳನ್ನು ನೀಡಿ ಅಭಿವೃದ್ಧಿ ಶುಲ್ಕವನ್ನು ಪಾವತಿ ಮಾಡಿ ಖಾತಾವನ್ನು ಪಡೆಯುವ ಪದ್ಧತಿಯನ್ನು ಸರ್ಕಾರ ಜಾರಿಗೊಳಿಸುತ್ತದೆಯೇ?

ಶ್ರೀ ಅನಂತ್‌ನಾಗ್ (ಬೆಂಗಳೂರು ನಗರ ಅಭಿವೃದ್ಧಿ ರಾಜ್ಯ ಸಚಿವರು) :

ಅ) 189 ಪ್ರದೇಶಗಳು ಹೊಸದಾಗಿ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಗೆ ಸೇರಿಸಲ್ಪಟ್ಟಿವೆ.

ಆ) ಸುಮಾರು 1.04 ಲಕ್ಷ ಸ್ವತ್ತುಗಳು (ನಿವೇಶನಗಳು ಮನೆಗಳು) ಬರುತ್ತವೆ.

ಇ) ಹೌದು.

ಈ) ಇಲ್ಲಿಯವರೆಗೆ (31-3-1998ರವರೆಗೆ) 20,258 ಮನೆಗಳ ಮಾಲೀಕರು ಮೇಲ್ಪಾಟ್ಟು ವೆಚ್ಚ ಪಾವತಿ ಮಾಡಿ ಖಾತೆಗಳನ್ನು ಪಡೆದಿರುತ್ತಾರೆ.

ಉ) ಹೌದು. ಶ್ರೀ ಈಶ್ವರ್‌ಭಟ್ ನಿವೃತ್ತ ಜಿಲ್ಲಾ ನ್ಯಾಯಾಧೀಶರವರನ್ನು ದೂರುಗಳ ಬಗ್ಗೆ ವಿಚಾರಣೆ ನಡೆಸಿ ವರದಿ ನೀಡಲು ಬೆಂಗಳೂರು ಮಹಾನಗರ ಪಾಲಿಕೆ ನೇಮಕ ಮಾಡಿದೆ. ಆ ವರದಿಯನ್ನು ಆಧರಿಸಿ, ತಪ್ಪಿತಸ್ಥ ನೌಕರರ ವಿರುದ್ಧ ಇಲಾಖಾ ವಿಚಾರಣೆ ಮಾಡಲಾಗುವುದು.

ಊ) ಅಭಿವೃದ್ಧಿ ಶುಲ್ಕ ಪಾವತಿ ಪದ್ಧತಿಯನ್ನು ಸರಳೀಕರಿಸಿ ಅರ್ಜಿದಾರರೇ ನಿವೇಶನಗಳ ಅಳತೆಯ ಪ್ರಕಾರ ಚದುರು ಗಜ ಒಂದಕ್ಕೆ ರೂ. 100.00 ರಂತೆ ಲೆಕ್ಕ ಹಾಕಿ ಬೆಂಗಳೂರು ವಿಜಯ ಬ್ಯಾಂಕಿನ ಯಾವುದೇ ಶಾಖೆಯಲ್ಲಿ ಪಾವತಿ ಮಾಡಿ ಚಲನ್ನಿನೊಡನೆ ಖಾತೆಗಾಗಿ ಅರ್ಜಿಯನ್ನು ದಾಖಲೆಗಳೊಂದಿಗೆ ಸಲ್ಲಿಸಬಹುದಾಗಿದೆ.

ಶ್ರೀ ಎನ್ ರಾಜಣ್ಣ : ಸನ್ಮಾನ್ಯ ಉಪಾಧ್ಯಕ್ಷರೇ, ಬೆಂಗಳೂರು ಮಹಾನಗರಪಾಲಿಕೆ ತನ್ನ ವ್ಯಾಪ್ತಿಗೆ ಹೊಸದಾಗಿ ಎಷ್ಟು ಪ್ರದೇಶಗಳನ್ನು ಸೇರಿಸಿಕೊಂಡಿದೆ ಎನ್ನುವುದಕ್ಕೆ 189 ಪ್ರದೇಶಗಳನ್ನು ಹೊಸದಾಗಿ ಸೇರಿಸಲಾಗಿದೆ ಎಂದು ಹೇಳಿದ್ದಾರೆ. ಎರಡನೆಯದಾಗಿ, ಈ ಪ್ರದೇಶಗಳಲ್ಲಿ ಬರುವ ರೆವಿನ್ಯೂ ನಿವೇಶನಗಳು ಹಾಗೂ ಮನೆಗಳು ಎಷ್ಟು ಎನ್ನುವುದಕ್ಕೆ 1 ಲಕ್ಷದ 4 ಸಾವಿರ ಎಂದು ಹೇಳಿದ್ದಾರೆ. 31-3-98 ರವರೆಗೆ ಅಂದರೆ 2 ವರ್ಷಗಳಲ್ಲಿ ಖಾತಾ ಮಾಡಿರುವುದು 20,258. ಇನ್ನೂ 80,772

ನಿವೇಶನಗಳ ಖಾತಾ ಮಾಡಿಲ್ಲ. ಖಾತಾ ಪಡೆಯಲು ಬಂದಂಥ ಎಷ್ಟು ಸಾವಿರ ಅರ್ಜಿಗಳು ಇನ್ನೂ ನಗರಪಾಲಿಕೆಯ ಕಛೇರಿಯಲ್ಲಿವೆ? ಇದಕ್ಕೆ ಕಾರಣವೇನು? ಇನ್ನೂ ಖಾತೆ ಪಡೆಯಲು ಹಣ ಪಾವತಿ ಮಾಡಲು ಹೋದರೆ ವಂಶವೃಕ್ಷವನ್ನು ಕೇಳುತ್ತಾರೆ. ತಾತ ಮುತ್ತಾತಂದಿರ ಪತ್ರವನ್ನು ಕೇಳುತ್ತಾರೆ. ಅವರು ಇಲ್ಲವೆಂದರೆ ಸ್ಮಶಾನಕ್ಕೆ ಹೋಗಿ ಸಹಿ ತೆಗೆದುಕೊಂಡು ಬನ್ನಿ ಎಂದು ಹೇಳುತ್ತಾರೆ. ಇಷ್ಟೆಲ್ಲಾ ತೊಂದರೆ ಕೊಡುತ್ತಾರೆ. ತಾವು 2 ವರ್ಷಗಳಲ್ಲಿ ಮಾಡಿರುವುದು ಕೇವಲ 20 ಸಾವಿರ. ಇನ್ನೂ 80 ಸಾವಿರ ಇದೆ. ಈ 80 ಸಾವಿರದಲ್ಲಿ ಶೇ. 10 ರಷ್ಟರಲ್ಲಿ ಸಮಸ್ಯೆಗಳಿರಬಹುದು. ಇನ್ನುಳಿದ ಶೇ. 90ರಷ್ಟನ್ನು ಏಕೆ ಬೇಗ ಮುಗಿಸಬಾರದು?

ಶ್ರೀ ಅನಂತನಾಗ್ : ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಸದಸ್ಯರು ಹೇಳಿದಂತೆ ಸಾರ್ವಜನಿಕರಿಂದ ಅನೇಕ ದೂರುಗಳು ಬಂದುದ್ದರಿಂದ, ಮೊದಲು ಅಭಿವೃದ್ಧಿ ಶುಲ್ಕವನ್ನು ಕಟ್ಟಿಸಿಕೊಂಡು ನಂತರ ಆಸ್ತಿ ತೆರಿಗೆಯನ್ನು ಕಟ್ಟಿಸಿಕೊಳ್ಳುವುದಕ್ಕೆ 31-3-98 ಕೊನೆಯ ತಾರೀಖು ಎಂದು ವ್ಯವಸ್ಥೆ ಮಾಡಿದ್ದನ್ನು ಈಗ 3 ತಿಂಗಳವರೆಗೆ ಅಂದರೆ ಜೂನ್‌ವರೆಗೆ ವಿಸ್ತರಿಸಿದ್ದೇವೆ. ಇಂಥ ಅನೇಕ ದೂರುಗಳು ಬಂದದ್ದರಿಂದ ಈಶ್ವರ ಭಟ್ ಎನ್ನುವ ನಿವೃತ್ತ ಜಿಲ್ಲಾ ನ್ಯಾಯಾಧೀಶರನ್ನು ನೇಮಕ ಮಾಡಿದ್ದು, ಸಾರ್ವಜನಿಕರಿಂದ ಯಾವುದೇ ದೂರುಗಳು, ಕನಿಷ್ಟ ಅವು ಓರಲ್ ಕಂಪ್ಲೇಂಟ್‌ಗಳಾಗಿದ್ದರೂ ಕೂಡ ತಕ್ಷಣ ಕ್ರಮ ಕೈಗೊಳ್ಳಬೇಕೆಂದು ಅವರಿಗೆ ನಿರ್ದೇಶನವನ್ನೂ ಕೊಟ್ಟಿದ್ದೇವೆ. ಅದೂ ಅಲ್ಲದೆ ಬೆಂಗಳೂರು ಮಹಾನಗರ ಪಾಲಿಕೆ ಸ್ವಯಂ ಘೋಷಿತ ಆಸ್ತಿ ತೆರಿಗೆ ಪದ್ಧತಿಯ ಒಂದು ಕೈಪಿಡಿಯನ್ನು ಮಾಡಿ, ಇದರಿಂದ ಸಾರ್ವಜನಿಕರು ಸೆಲ್ಫ್ ಅಸ್ಸೆಸ್‌ಮೆಂಟ್ ಮಾಡುವಂಥ ಒಂದು ಹೊಸ ಪದ್ಧತಿಯನ್ನು ಮಾಡಿದ್ದೇವೆ. ಇದರ ಮೂಲಕ ಭ್ರಷ್ಟಾಚಾರವನ್ನು ಕಡಿಮೆ ಮಾಡುವುದಕ್ಕೆ ನಾವು ಪ್ರಾಮಾಣಿಕ ಪ್ರಯತ್ನವನ್ನು ಮಾಡುತ್ತಿದ್ದೇವೆ. ಅದೇ ರೀತಿ ಇವತ್ತು ಎಲ್ಲಾ ವಾರ್ಡ್‌ಗಳಲ್ಲಿ ಪ್ರತಿದಿವಸ ಒಂದರಂತೆ, ಒಂದೊಂದು ದಿವಸ ಎರಡರಂತೆ ಶಿಬಿರಗಳನ್ನು ಮಾಡಿ ಜನರಿಗೆ ಆದಷ್ಟೂ ತೊಂದರೆ ಕಡಿಮೆ ಮಾಡುವುದಕ್ಕೆ ವ್ಯವಸ್ಥೆಯನ್ನು ಮಾಡಿದ್ದೇವೆ. ಮನೆಗಳನ್ನು ಕಟ್ಟಿಸಿಕೊಂಡಿರುವಂಥ 20 ಸಾವಿರ ಮಾಲೀಕರಿಗೆ ಖಾತೆಗಳನ್ನು ಮಾಡಿ ಕೊಟ್ಟಿದ್ದೇವೆ. ಒಂದು ಸಲ ಈ ಪದ್ಧತಿ ಪ್ರಾರಂಭವಾದ ನಂತರ ಇದು ಶೀಘ್ರಗತಿಯಲ್ಲಿ ಆಗುವ ಭರವಸೆ ನಮಗಿದೆ ಎನ್ನುವುದನ್ನು ಮಾನ್ಯ ಸದಸ್ಯರಿಗೆ ತಮ್ಮ ಮೂಲಕ ತಿಳಿಸುತ್ತೇನೆ.

ಶ್ರೀ ಎನ್. ರಾಜಣ್ಣ : ಇನ್ನೂ 80,772 ಮಾಲೀಕರು ಉಳಿದಿದ್ದಾರೆ. ನೀವು ಎರಡು ವರ್ಷಗಳಲ್ಲಿ 20 ಸಾವಿರ ಮಾತ್ರ ಮುಗಿಸಿದ್ದೀರಿ. 80 ಸಾವಿರ ಮುಗಿಸಬೇಕಾದರೆ ಇನ್ನೂ ಎಷ್ಟು ವರ್ಷಗಳು ಬೇಕು? ಇವರು 3 ತಿಂಗಳು ಮಾತ್ರ ಸಮಯವನ್ನು ವಿಸ್ತರಣೆ ಮಾಡಿದ್ದಾರೆ. ಈ 3 ತಿಂಗಳು ಸಾಕಾಗುವುದಿಲ್ಲ. ಇಂಥ ತಾರೀಖಿನೊಳಗೆ ಕಲೆಕ್ಟ್ ಮಾಡಿ ಮುಗಿಸುತ್ತೇವೆ ಎನ್ನುವುದನ್ನು ಗುರುತು ಮಾಡಿ ಹೇಳಿ. ಇದನ್ನು ಕಲೆಕ್ಟ್ ಮಾಡಿದರೆ ಕಾರ್ಪೊರೇಷನ್‌ಗೆ ರೆವಿನ್ಯೂ ಬರುತ್ತದೆ. ಈಗಾಗಲೇ ಬಾಂಡ್ ಮೇಲೆ 125 ಕೋಟಿ ರೂಪಾಯಿಗಳನ್ನು ಕಲೆಕ್ಟ್ ಮಾಡಿದ್ದೀರಿ. ಕನಿಷ್ಠ ಪಕ್ಷ ಈ ಹಣ ಬಂದರೆ ಸುಮಾರು 100 ಕೋಟಿ ರೂಪಾಯಿಗಳಿಗಿಂತ ಹೆಚ್ಚು ಬರುತ್ತದೆ. ಶೀಘ್ರವಾಗಿ ಕಲೆಕ್ಟ್ ಮಾಡುವುದಕ್ಕೆ

ಒಂದು ಡೇಟ್ ಕೊಟ್ಟು ಯಾವಾಗ ಮಾಡುತ್ತೀರಿ ಎನ್ನುವುದನ್ನು ಹೇಳಬೇಕು. ಅಧಿಕಾರಿಗಳ ಮೇಲೆ ದೂರು ಬಂದರೆ ಕ್ರಮ ಕೈಗೊಳ್ಳುವುದಕ್ಕೆ ನಿವೃತ್ತ ಜಿಲ್ಲಾ ನ್ಯಾಯಾಧೀಶರಾದ ಶ್ರೀ ಈಶ್ವರ್ ಭಟ್ ರವರನ್ನು ನೇಮಕ ಮಾಡಿ ನಿರ್ದೇಶನವನ್ನು ಕೊಟ್ಟಿದ್ದೀರಿ. ಆದರೆ ಅವರನ್ನೂ ಕೂಡ ತಪ್ಪಿಸಿಕೊಂಡು ಕೆಲವು ಅಧಿಕಾರಿಗಳು ಸಾರ್ವಜನಿಕರಿಗೆ ತೊಂದರೆ ಕೊಡುತ್ತಿದ್ದಾರೆ. ಆ ನ್ಯಾಯಾಧೀಶರನ್ನೂ ಸಹ ತಪ್ಪಿಸಿಕೊಂಡು ತೊಂದರೆ ಕೊಡುವಂಥ ಅಧಿಕಾರಿಗಳಿಗೆ ಕೆ.ಸಿ.ಎಸ್.ಆರ್. ಪ್ರಕಾರ ಯಾರಿಗಾದರೂ ಫನಿಶ್‌ಮೆಂಟ್ ಕೊಟ್ಟಿದ್ದೀರಾ? ಶಿಕ್ಷೆ ಕೊಟ್ಟಿಲ್ಲ ಎಂದರೆ ಮುಂದೆ ಶಿಕ್ಷೆ ಕೊಡುವುದಕ್ಕೆ ಏನಾದರೂ ಸ್ಕೀಂ ಹಾಕಿಕೊಂಡಿದ್ದೀರಿ ಏಕೆಂದರೆ ರೆವಿನ್ಯೂ ಮನೆ ಮಾಲೀಕರು ಅಭಿವೃದ್ಧಿ ಶುಲ್ಕ ಪಾವತಿ ಮಾಡಿ ಖಾತವನ್ನು ಪಡೆಯಲು ಬಂದರೆ ಅಲ್ಲಿಯ ಅಧಿಕಾರಿಗಳು ಅವರ ತಾತ ಮುತ್ತಾತ ಹೀಗೆ ವಂಶವೃಕ್ಷವನ್ನೇ ಕೇಳಿ ತೊಂದರೆ ಕೊಡುತ್ತಾರೆ. ಇದು ಯಾವ ಹಂತಕ್ಕೆ ತಲುಪಿದೆಯೆಂದರೆ ಸತ್ತುಹೋಗಿರುವನನ್ನು ಸ್ಮಶಾನಕ್ಕೆ ಹೋಗಿ ಕರೆದುಕೊಂಡು ಬಾ ಎಂದು ಹೇಳುವ ಪರಿಸ್ಥಿತಿಗೆ ಕೆಲವು ಅಧಿಕಾರಿಗಳು ಇದ್ದಾರೆ. ಆ ರೀತಿ ಅಲ್ಲಿ ಸಾಬೋಟೇಜ್ ಮಾಡುತ್ತಿದ್ದಾರೆ. ಅದಷ್ಟು ಜನಗಳಿಗೆ ಅನುಕೂಲ ಆಗಬೇಕು. ಸಿಂಗಲ್ ವಿಂಡೊ ಸಿಸ್ಟಮ್‌ನಲ್ಲಿ ವಿಜಯಬ್ಯಾಂಕನ್ನು ಇಲ್ಲಿ ಮಾಡಿದ್ದೀರಿ. ಅದನ್ನು ನಾವು ಒಪ್ಪಿಕೊಳ್ಳುತ್ತೇವೆ. ದೂರುಗಳು ಬಂದರೆ ಕ್ರಮ ಕೈಗೊಳ್ಳಲು ನಿವೃತ್ತ ಜಿಲ್ಲಾ ನ್ಯಾಯಾಧೀಶರನ್ನು ನೇಮಕ ಮಾಡಿದ್ದೀರಿ ಅದನ್ನೂ ಕೂಡ ಒಪ್ಪಿಕೊಳ್ಳುತ್ತೇವೆ. ಇಷ್ಟೆಲ್ಲಾ ಇದ್ದರೂ ಈ ತೊಂದರೆ ಕೊಡುವ ಅಧಿಕಾರಿಗಳಿಗೆ ಕೆ.ಸಿ.ಎಸ್ ರೂಲ್ಸ್ ಪ್ರಕಾರ ಶಿಕ್ಷೆ ಕೊಟ್ಟು ಮನೆಗೆ ಕಳುಹಿಸಲಿಕ್ಕೆ ಪ್ರಯತ್ನ ಮಾಡುತ್ತೀರಾ? ಇದರ ಬಗ್ಗೆ ದಯಮಾಡಿ ಹೇಳಬೇಕು.

ಶ್ರೀ ಅನಂತ್‌ನಾಗ್ : ಮಾನ್ಯ ಉಪಾಧ್ಯಕ್ಷರೆ, ಇವೆಲ್ಲಾ ತೊಂದರೆಗಳನ್ನು ಗಮನಕ್ಕೆ ತಂದುಕೊಂಡೇ ಈ ಒಂದು ಹೊಸ ವ್ಯವಸ್ಥೆಯನ್ನು ತಂದಿದ್ದೇವೆ. ಮಾನ್ಯ ಸದಸ್ಯರೂ ಕೂಡ ಮಹಾನಗರ ಪಾಲಿಕೆಯ ಸದಸ್ಯರಾಗಿದ್ದರು. ಆವಾಗ ಅಲ್ಲಿ ಈ ವ್ಯವಸ್ಥೆ ಮಾಡಿರಲಿಲ್ಲ. ಈ ತೊಂದರೆಗಳನ್ನು ಕಂಡುಕೊಂಡೇ ಕಳೆದ ವರ್ಷ ಪ್ರಯತ್ನ ಮಾಡಿ ರೆಸಲ್ಯೂಷನ್‌ಗಳನ್ನು ತಂದು ಈ ವ್ಯವಸ್ಥೆಯನ್ನು ಮಾಡಿದ್ದೇವೆ. ಇದರ ಮೂಲಕ ಕನಿಷ್ಟ ಪಕ್ಷ 75 ರಿಂದ 80 ಪರ್ಸೆಂಟ್ ಆದರೂ ಕವರ್ ಮಾಡುತ್ತೇವೆ ಎನ್ನುವ ಭರವಸೆ ನಮಗೆ ಇದೆ. ಈ ಒಂದು ಪ್ರಯತ್ನ ನಡೆಯಲಿ. ಇನ್ನು, ಯಾರಾದರು ಏನಾದರೂ ತಪ್ಪು ಮಾಡಿದವರಿಗೆ ಖಂಡಿತವಾಗಿಯೂ ಶಿಕ್ಷೆ ಕೊಡುತ್ತೇವೆ. ಶಿಕ್ಷೆ ಕೊಡುವುದಕ್ಕೆ ಏನಾದರೂ ಸ್ಕೀಂ ಹಾಕಿಕೊಂಡಿದ್ದಾರೆಯೇ ಎಂದು ಮಾನ್ಯ ಸದಸ್ಯರು ಕೇಳಿದ್ದಾರೆ. ಅದರ ಬಗ್ಗೆ ಈಗಾಗಲೇ ಏನೂ ಹೇಳುವುದಕ್ಕಾಗುವುದಿಲ್ಲ.

ಉಪಾಧ್ಯಕ್ಷರು : ಶ್ರೀ ಚಂದ್ರಕಾಂತ್ ಬೆಲ್ಲದ್ ಇವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 833 ಮತ್ತು ಶ್ರೀ ಕಾಗೋಡು ತಿಮ್ಮಪ್ಪ ಇವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 922, ಈ ಪ್ರಶ್ನೆಗಳಿಗೆ ಸಮಯವನ್ನು ಕೇಳಿದ್ದಾರೆ.

ಉಪಾಧ್ಯಕ್ಷರು : ಪ್ರಶ್ನೋತ್ತರ ವೇಳೆ ಮುಗಿಯಿತು.